# ಮಹಾಶಿವರಾತ್ರಿ

(26.2.2025)

ಮತ್ತು

# ಶ್ರೀಭವಾನೀ ಮಲಹಾನಿಕರೇಶ್ವರಸ್ವಾಮಿ ಮಹಾರಥೋತ್ಸವ

# ಆಹ್ವಾನ ಪತ್ರಿಕೆ

(23.2.2025 - 28.2.2025)



ತುಂಗೋತ್ತಮಾಂಗವಿಲಸನ್ಮೃಗಭೃತ್ಕಲಾಯ
ಶೃಂಗಾದ್ರಿವಾಸರಸಿಕಾಯ ಮಹೇಶ್ವರಾಯ ।
ಶೀತಾಂಶುಭಾಸ್ಕರಕೃಶಾನುದೃಶೇ ಭವಾನೀ–
ಭರ್ತ್ರೇ ನಮೋಽಸ್ತು ಮಲಹಾನಿಕರೇಶ್ವರಾಯ ॥

# ಮಹಾಶಿವರಾತ್ರಿ ಮತ್ತು ಶ್ರೀಭವಾನೀ ಮಲಹಾನಿಕರೇಶ್ವರಸ್ವಾಮಿ ಮಹಾರಥೋತ್ಸವ

ಆಸ್ತಿಕಮಹಾಜನರೇ !

ತ್ರೇತಾಯುಗದಲ್ಲಿ ಶ್ರೀರಾಮಚಂದ್ರನ ಅವತಾರಕ್ಕೆ ಕಾರಣವಾದ ಪುತ್ರಕಾಮೇಷ್ಟಿಯಾಗವನ್ನು ದಶರಥಮಹಾರಾಜನಿಂದ ಮಾಡಿಸಿದ, ಮಹಾಮಹಿಮಸಂಪನ್ನರಾದ ಶ್ರೀಋಷ್ಯಶೃಂಗಮುನಿಗಳು ತಪಸ್ಸನ್ನು ಆಚರಿಸಿದ ಪವಿತ್ರಭೂಮಿ ಶೃಂಗೇರೀ ಕ್ಷೇತ್ರ. ಋಷ್ಯಶೃಂಗಮುನಿಗಳ ತಂದೆಯವರಾದ ವಿಭಾಂಡಕಮುನಿಗಳ ತಪಸ್ಸಿಗೆ ಮೆಚ್ಚಿದ ಪರಮೇಶ್ವರನು "ಶ್ರೀಮಲಹಾನಿಕರೇಶ್ವರ" ಎಂಬ ಹೆಸರಿನಿಂದ ಈಶ್ವರಗಿರಿಯ ಮೇಲೆ ಲಿಂಗರೂಪದಲ್ಲಿ ಉದ್ಭವಿಸಿದನು. ಅಂದಿನಿಂದಲೂ ಶ್ರೀವಿಭಾಂಡಕಮುನಿಗಳು, ಶ್ರೀಋಷ್ಯಶೃಂಗಮುನಿಗಳು, ಶ್ರೀಶಂಕರಭಗವತ್ಪಾದಾಚಾರ್ಯರು ಮತ್ತು ದಕ್ಷಿಣಾಮ್ನಾಯ ಶ್ರೀಶಾರದಾಪೀಠದ ಅವಿಚ್ಛಿನ್ನ ಗುರುಪರಂಪರೆಯ ವಿದ್ಯಾತಪೋಮೂರ್ತಿಗಳಾದ ಎಲ್ಲ ಜಗದ್ಗುರುಗಳಿಂದಲೂ ಪೂಜಿಸಲ್ಪಡುತ್ತಿರುವ ಸಪರಿವಾರ ಶ್ರೀಭವಾನೀಮಲಹಾನಿಕರೇಶ್ವರ ಸ್ವಾಮಿಯು ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಈತಿಬಾಧೆಗಳನ್ನು ನಿವಾರಿಸುತ್ತಾ ಭಕ್ತರ ಎಲ್ಲ ಕೋರಿಕೆಗಳನ್ನೂ ಈಡೇರಿಸುತ್ತಿದ್ದಾನೆ. ಶ್ರೀಶಾರದಾಪೀಠದ ಶಿಷ್ಯರಾಗಿದ್ದ ವಿಜಯನಗರ ಕೆಳದಿ ಮೊದಲಾದ ಸಂಸ್ಥಾನಗಳ ಅರಸರುಗಳು ಶ್ರೀಭವಾನೀಮಲಹಾನಿಕರೇಶ್ವರ ದೇವಾಲಯಕ್ಕೆ ಈ ಸುತ್ತಮುತ್ತಲಿನ ಅನೇಕ ಗ್ರಾಮಗಳನ್ನು ದಾನಮಾಡಿ ವಿಶೇಷವಾದ ಸೇವೆಯನ್ನು ಮಾಡಿದ್ದಾರೆ. ಪುರಾಣಪ್ರಸಿದ್ಧವಾದ ಈ ದಿವ್ಯಸನ್ನಿಧಿಯಲ್ಲಿ ಪ್ರತಿವರ್ಷ ನಡೆಯುವ ಅನೇಕ ಉತ್ಸವಗಳಲ್ಲಿ ಮಹಾಶಿವರಾತ್ರಿಯ ಸಂದರ್ಭದಲ್ಲಿ ಸಪ್ತಾಹ್ನಿಕದೀಕ್ಷೆಯಿಂದ ನಡೆಸಲಾಗುವ ಮಹಾರಥೋತ್ಸವವು ಅತ್ಯಂತ ಪ್ರಾಮುಖ್ಯವನ್ನು ಹೊಂದಿದೆ. ಈ ಉತ್ಸವವು ಕ್ರೋಧಿನಾಮ ಸಂವತ್ಸರದ ಮಾಘ ಕೃಷ್ಣ ದಶಮಿ, ಭಾನುವಾರ (23.2.2025) ದಿಂದ ಫಾಲ್ಗುಣ ಶುಕ್ಲ ದ್ವಿತೀಯಾ, ಶನಿವಾರ(1.3.2025)ದ ವರೆಗೆ **ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿ**ಗಳವರ ಪರಮಾನುಗ್ರಹದೊಂದಿಗೆ ಅತ್ಯಂತ ವೈಭವೋಪೇತವಾಗಿ ನಡೆಯಲಿದೆ. ಈ ಸಂದರ್ಭದಲ್ಲಿ ಶ್ರೀಮಠದಲ್ಲಿ ಮಹಾರುದ್ರಯಾಗವು, ಮಹಾಶಿವರಾತ್ರಿಯಂದು (26.2.2025) ಜಗದ್ಗುರುಗಳವರ ಅಮೃತಹಸ್ತದಿಂದ ಮಹಾಪೂಜೆ ಮತ್ತು ರಾತ್ರಿ ಚತುರ್ಯಾಮಪೂಜೆ, ಅಮಾವಾಸ್ಯೆಯ ದಿನ ಲಕ್ಷಮಲ್ಲಿಕಾರ್ಚನೆ ಮಹಾರಥೋತ್ಸವ, ಪ್ರತಿದಿನ ಡೋಲೋತ್ಸವ ಮುಂತಾದ ಅನೇಕ ಕಾರ್ಯಕ್ರಮಗಳು, ಶ್ರೀಪಂಚಾಕ್ಷರೀ–ಶ್ರೀವಿದ್ಯಾ–ಮಹಾಗಣಪತ್ಯಾದಿ–ಮಂತ್ರಾನುಷ್ಠಾನಗಳು ಚತುರ್ವೇದಪುರಾಣಾದಿ ಪಾರಾಯಣಗಳು ನಡೆಯಲಿವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಆಸ್ತಿಕಮಹಾಜನರು ಭಾಗವಹಿಸಿ ಶ್ರೀಭವಾನೀಮಲಹಾನಿಕರೇಶ್ವರ ಮತ್ತು ಶ್ರೀಜಗದ್ಗುರು ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂದು ನಿವೇದಿಸುತ್ತಿದ್ದೇವೆ.

ಗುರುಸೇವಾನಿರತ
ಪಿ. ಎ. ಮುರಳಿ
ಆಡಳಿತಾಧಿಕಾರಿಗಳು

ಶೃಂಗೇರಿ
5.2.2025

# ಕಾರ್ಯಕ್ರಮಗಳು

**22.2.2025 ಮಾಘ ಬಹುಳ ನವಮಿ ಶನಿವಾರ**

ಸಾಯಂ – ಈಶ್ವರಗಿರಿಯಲ್ಲಿ ಸ್ತಂಭಗಣಪತಿಗೆ ವಿಶೇಷಪೂಜೆ. ಪ್ರಾರ್ಥನೆ, ಅಂಕುರಾರೋಪಣ

**23.2.2025 ಮಾಘ ಬಹುಳ ದಶಮಿ ಭಾನುವಾರ**

ಪ್ರಾತಃ ಶ್ರೀಭವಾನೀ ಮಲಹಾನಿಕರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಧ್ವಜಾರೋಹಣ,
ವೇದಪಾರಾಯಣ, ಶಿವಪುರಾಣ–ದೇವೀಭಾಗವತ–ಗಣೇಶಪುರಾಣ ಪಾರಾಯಣ ಮತ್ತು ಮಂತ್ರಜಪಗಳ ಪ್ರಾರಂಭ

**24.2.2025 ಮಾಘ ಬಹುಳ ಏಕಾದಶಿ ಸೋಮವಾರ**

ಪ್ರಾತಃ – ರಥೋತ್ಸವಾಂಗ ಹೋಮಗಳು, ಜಪ, ಪಾರಾಯಣಗಳು
ಸಾಯಂಕಾಲ 6 ಗಂಟೆಗೆ ಶ್ರೀಭವಾನೀ ಮಲಹಾನಿಕರೇಶ್ವರ ಸ್ವಾಮಿಗೆ ರಾಜಬೀದಿ ಉತ್ಸವ
ಸಾಯಂಕಾಲ 6.30ರಿಂದ ಶ್ರೀಮಠದ ಪ್ರವಚನ ಮಂದಿರದಲ್ಲಿ ಶ್ರೀಭವಾನೀ ಮಲಹಾನಿಕರೇಶ್ವರ ಸ್ವಾಮಿಗೆ ಡೋಲೋತ್ಸವ

**25.2.2025 ಮಾಘ ಬಹುಳ ದ್ವಾದಶಿ ಮಂಗಳವಾರ**

ಪ್ರಾತಃ 7 ಗಂಟೆಗೆ ಮಹಾಶಿವರಾತ್ರಿಯ ಅಂಗವಾಗಿ ಶ್ರೀಮಠದ ಶ್ರೀನರಸಿಂಹಭಾರತೀ
ಯಾಗಮಂಟಪದಲ್ಲಿ ಮಹಾರುದ್ರ ಪುರಶ್ಚರಣೆ ಪ್ರಾರಂಭ
ಪ್ರಾತಃ 10 ಗಂಟೆಗೆ ಶ್ರೀವಿದ್ಯಾಶಂಕರೇಶ್ವರ ಸ್ವಾಮಿ ಉತ್ಸವದಲ್ಲಿ ಈಶ್ವರಗಿರಿಗೆ ಚಿತ್ತೈಸುವುದು.
ಸಾಯಂಕಾಲ 5 ಗಂಟೆಗೆ ಪ್ರದೋಷಪೂಜೆ 6.30ಕ್ಕೆ ಬೀದಿ ಉತ್ಸವ, 7ಕ್ಕೆ ಪ್ರವಚನ ಮಂದಿರದಲ್ಲಿ ಡೋಲೋತ್ಸವ

**26.2.2025 ಮಾಘ ಬಹುಳ ತ್ರಯೋದಶಿ ಬುಧವಾರ**

ಪ್ರಾತಃ 7 ಗಂಟೆಯಿಂದ ಶ್ರೀಶಂಕರ ಭಗವತ್ಪಾದಾಚಾರ್ಯರ ಸನ್ನಿಧಿಯಲ್ಲಿ
ಶತರುದ್ರಾಭಿಷೇಕ, ಮಹಾರುದ್ರ ಪುರಶ್ಚರಣೆ
ಪ್ರಾತಃ 11.30ಕ್ಕೆ ಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಮೃತಹಸ್ತಗಳಿಂದ
ಶ್ರೀಭವಾನೀ ಮಲಹಾನಿಕರೇಶ್ವರ ಸ್ವಾಮಿಗೆ ವಿಶೇಷ ಪೂಜೆ.
ಸಾಯಂಕಾಲ 7.30ರಿಂದ ಶ್ರೀಮಲಹಾನಿಕರೇಶ್ವರ ಸ್ವಾಮಿಗೆ ನಾಲ್ಕು ಯಾಮ ಪೂಜೆ.
ಸಾಯಂಕಾಲ 7 ಗಂಟೆಯಿಂದ ಗುರುನಿವಾಸದಲ್ಲಿ ಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಮೃತಹಸ್ತದಿಂದ
ಶ್ರೀಚಂದ್ರಮೌಳೀಶ್ವರ ಸ್ವಾಮಿಗೆ ನಾಲ್ಕು ಯಾಮ ವಿಶೇಷ ಪೂಜೆ

**27.2.2025 ಮಾಘ ಬಹುಳ ಚತುರ್ದಶಿ ಗುರುವಾರ**

ಪ್ರಾತಃ ಜಪ, ಪಾರಾಯಣಾದಿಗಳು, ಮಹಾರುದ್ರ ಪುರಶ್ಚರಣೆ
ಸಾಯಂಕಾಲ 6 ಗಂಟೆಗೆ ಬೀದಿ ಉತ್ಸವ, 6.30ಕ್ಕೆ ಡೋಲೋತ್ಸವ

**28.2.2025 ಮಾಘ ಅಮಾವಾಸ್ಯೆ – ಉಪರಿ ಪ್ರತಿಪತ್ ಶುಕ್ರವಾರ**

ಪ್ರಾತಃ 8 ಗಂಟೆಗೆ ಶ್ರೀಮಲಹಾನಿಕರೇಶ್ವರ ಸ್ವಾಮಿಗೆ ಲಕ್ಷ ಮಲ್ಲಿಕಾರ್ಚನೆ.
ಪ್ರಾತಃ 10 ಗಂಟೆಗೆ ಶ್ರೀಶ್ರೀ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಮಹಾನೀರಾಜನ, ಪ್ರಾರ್ಥನೆ,
ರಥಾರೋಹಣ, **ರಥೋತ್ಸವ.**
ಸಾಯಂಕಾಲ 6 ಗಂಟೆಗೆ **ಮಹಾರಥೋತ್ಸವ.**

**1.3.2025 ಫಾಲ್ಗುಣ ಶುದ್ಧ ದ್ವಿತೀಯಾ ಶನಿವಾರ**

ಓಕಳೀ ಉತ್ಸವ, ತುಂಗಾನದಿಯಲ್ಲಿ ಅವಭೃಥ ಸ್ನಾನ, ಮಹಾರುದ್ರ ಯಾಗದ ಪೂರ್ಣಾಹುತಿ
ಸಾಯಂಕಾಲ 6.30ರಿಂದ ಶಾರದಾಂಬಾ ದೇವಾಲಯದಲ್ಲಿ ಸಂಧಾನೋತ್ಸವ.
ರಾತ್ರಿ 8 ಗಂಟೆಗೆ ತುಂಗಾನದಿಯಲ್ಲಿ ತೆಪ್ಪೋತ್ಸವ. ಧ್ವಜಾವರೋಹಣ, ಪ್ರಸಾದ ವಿನಿಯೋಗ.





**ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ**
**ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ**